# ಬಾಕುಡರ ಸಾಂಸ್ಕೃತಿಕ ಅಧ್ಯಯನ

ಪಿಹೆಚ್.ಡಿ. ಪದವಿಗಾಗಿ
ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ
ಸಂಶೋಧನ ಮಹಾಪ್ರಬಂಧದ ಅಂತಿಮ ಸಾರಲೇಖ


ಸಂಶೋಧಕರು

**ಅಮಿತಾ ಎಸ್.**

ಮಾರ್ಗದರ್ಶಕರು

**ಡಾ. ಮಾಧವ**

ಸಹಾಯಕ ಪ್ರಾಧ್ಯಾಪಕರು

ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು
ಮಂಗಳೂರು



## ಮಂಗಳೂರು ವಿಶ್ವವಿದ್ಯಾನಿಲಯ

**ಎಸ್.ವಿ.ಪಿ. ಅಧ್ಯಯನ ಕೇಂದ್ರ**

ಮಂಗಳಗಂಗೋತ್ರಿ – ೫೭೪೧೯೯

೨೦೨೩

# ಬಾಕುಡರ ಸಾಂಸ್ಕೃತಿಕ ಅಧ್ಯಯನ

## ಪರಿವಿಡಿ

**ಅಧ್ಯಾಯ 1**
1.1 ಅಧ್ಯಯನದ ಉದ್ದೇಶ ವ್ಯಾಪ್ತಿ
1.2 ಅಧ್ಯಯನದ ಸೈದ್ಧಾಂತಿಕ ಚೌಕಟ್ಟು
1.3 ಬಾಕುಡರ ಬಗೆಗೆ ಈ ವರೆಗೆ ನಡೆದಿರುವ ಅಧ್ಯಯಗಳು

**ಅಧ್ಯಾಯ 2**
2.1 ಬಾಕುಡರ ಮೂಲ
2.2 ಬಾಕುಡ ಪದ ನಿಷ್ಪತ್ತಿ
2.3 ಬಾಕುಡರ ಭಾಷೆ
2.4 ಬಾಕುಡರ ವೃತ್ತಿ
2.5 ವಾಸ್ತು
2.6 ಬಳಿ ಪದ್ಧತಿ
2.7 ಕುಟುಂಬ ಪದ್ಧತಿ
2.8 ಬಾಕುಡರ ಸಾಮಾಜಿಕ ಸ್ಥಾನಮಾನ

**ಅಧ್ಯಾಯ 3**
3.1 ಜನನ–ನಾಮಕರಣ
3.2 ಋತು ಶಾಂತಿ
3.3 ಮುಟ್ಟು
3.4 ಮದುವೆ
3.5 ಸೀಮಂತ
3.6 ಸಾವು–ಸಂಸ್ಕಾರ

**ಅಧ್ಯಾಯ 4**
**ಬಾಕುಡರ ವಾರ್ಷಿಕ ಆವರ್ತನದ ಆಚರಣೆಗಳು**
4.1 ಆಟಿ ಸಂಕ್ರಮಣ
4.2 ಪತ್ತನಾಜೆ
4.3 ಕೆಡ್ಡಸ

4.4 ವಿಷು
4.5 ಮಾಯಿ ತಿಂಗಳಿನ ಹತ್ತನೆಯ ದಿನ
4.6 ಮಾರ್ಚ್ ತಿಂಗಳಿನ ಸಂಕ್ರಮ
4.7 ಕರಂಗೋಲು ಕುಣಿತ

**ಅಧ್ಯಾಯ 5**
**ಬಾಕುಡರ ಜನಪದ ವೈದ್ಯ**
5.1 ಕೆಟ್ಟ ಕಣ್ಣಿನ ದೃಷ್ಠಿ
5.2 ಮೈಯಲ್ಲಿ ಬೀಳುವುದು
5.3 ದೃಷ್ಟಿ ತೆಗೆಯುವುದು
5.4 ಭೂತಗಳ ತಂಬಿಲ
5.5 ನಂಬಿಕೆಯ ಕಲ್ಲುಗಳು
5.6 ಕುಲೆ ಆರಾಧನೆ

**ಅಧ್ಯಾಯ 6**
**ಬಾಕುಡರ ಆರಾಧನಾ ಪದ್ಧತಿ**
6.1 ಭೂತರಾಧನೆ
6.2 ನಾಗಾರಾಧನೆ
6.3 ಕುಂಡಂಗೇರ್ ಕುಣಿತಗಳು
6.4. ಪಾಡ್ದನಗಳು
6.5 ತರವಾಡಿನ ಭೂತಗಳು

**ಉಪಸಂಹಾರ**
1. ಬಾಕುಡ ಸಂಸ್ಕೃತಿಯ ಭಿನ್ನತೆ ಮತ್ತು ವೈಶಿಷ್ಟ್ಯ
2. ಸಾಮಾಜಿಕ ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಅಭಿವೃದ್ಧಿ ನೆಲೆಯಲ್ಲಿ ಬಾಕುಡರು
3. ಕೊನೆ ಟಿಪ್ಪಣಿ
4. ಅನುಬಂಧ
5. ಪರಾಮರ್ಶನ ಗ್ರಂಥಗಳು
6. ಮಾಹಿತಿದಾರರ ವಿವರ

# ಬಾಕುಡರ ಸಾಂಸ್ಕೃತಿಕ ಅಧ್ಯಯನ

## ಅಧ್ಯಾಯ – 1
## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಸಂಸ್ಕೃತಿಯ ಬಗ್ಗೆ ವಿಚಾರ ಮಾಡುವಾಗ ಮೇಲ್ವರ್ಗದ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಕೆಳಜಾತಿ ಮತ್ತು ಬುಡಕಟ್ಟುಗಳ ಸಂಸ್ಕೃತಿಯನ್ನು ಕಡೆಗಣಿಸಿರುವುದು ಕಂಡುಬರುತ್ತದೆ. ಹೀಗಿರುವಾಗ ಶಿಷ್ಟ ಸಂಪ್ರದಾಯದಲ್ಲಿ ಹೇಗೆ ಆಚಾರ, ವಿಚಾರ, ರೀತಿ–ನೀತಿ, ನಿಯಮಗಳು ಕಟ್ಟಳೆಗಳು, ನಂಬಿಕೆಗಳು ಇವೆಯೋ ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಲ್ಲಿಯೂ ಇವೆ. ಯಾವುದೇ ವಿಚಾರಗಳನ್ನು ಮೇಲುನೋಟದಲ್ಲಿ ಕಂಡು ಗುರುತಿಸುವುದಕ್ಕಿಂತ ಆಳವಾದ ಸಂಶೋಧನೆಯ ಮೂಲಕ ತಿಳಿಯುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ ಅಥವಾ ಬುಡಕಟ್ಟಿನ ಸಾಂಸ್ಕೃತಿಕ ಅಧ್ಯಯನದಲ್ಲಿ ಆ ಬುಡಕಟ್ಟು ಜನ ವಾಸಿಸುವ ಪ್ರದೇಶ, ನಾಗರಿಕತೆ, ಅವರ ಪರಂಪರೆ ಇತಿಹಾಸ ಅವರ ಆಂತರಿಕ ಸಮಾಜ ರಚನೆ, ಕಸುಬು, ಕಲೆ, ಸಾಮಾಜಿಕ ಸ್ಥಾನಮಾನ, ಕೌಟುಂಬಿಕ ವ್ಯವಸ್ಥೆ, ನ್ಯಾಯ ಪದ್ಧತಿ, ಜನಸಂಖ್ಯೆ, ಜನನ, ಮರಣ, ಸಂಸ್ಕಾರ ಪದ್ಧತಿ, ರೀತಿ ರಿವಾಜು, ವೇಷ ಭೂಷಣಗಳು, ಆಹಾರ ಪಾನೀಯಗಳು, ಹವ್ಯಾಸಗಳು ಆರಾಧನಾ ಪದ್ಧತಿ ಇತ್ಯಾದಿಗಳನ್ನು ಗಮನಿಸುವ ದೃಷ್ಟಿಯಿಂದ ಸಮಗ್ರ ಅಧ್ಯಯನದ ಅವಶ್ಯಕತೆಯಿದೆ. ಈ ಉದ್ದೇಶವನ್ನಿಟ್ಟುಕೊಂಡು ಬಾಕುಡರ ಬದುಕಿನ ಹಲವು ಮಜಲುಗಳನ್ನು ವ್ಯಾಪಕವಾದ ಕ್ಷೇತ್ರಕಾರ್ಯ ನಡೆಸಿ ಮೂಲ ಸಾಮಗ್ರಿಗಳನ್ನಿಟ್ಟುಕೊಂಡು ನಡೆಸಬೇಕಾಗಿದೆ. ಈ ಅಧ್ಯಯನಕ್ಕೆ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಿಂದ – ಕಾಸರಗೋಡುವರೆಗಿನ ವ್ಯಾಪ್ತಿಯನ್ನು ಅಳವಡಿಸಿಕೊಂಡಿದ್ದೇನೆ.

## ಅಧ್ಯಾಯ – 1.2
## ಅಧ್ಯಯನದ ಸೈದ್ಧಾಂತಿಕ ಚೌಕಟ್ಟು

ಬಾಕುಡ ಜನರ ಅಧ್ಯಯನಕ್ಕೆ ಕ್ಷೇತ್ರ ಕಾರ್ಯದ ಅವಶ್ಯಕತೆಯಿರುವುದರಿಂದ ಇದನ್ನು ಸಾಂಸ್ಕೃತಿಕ ದೃಷ್ಟಿಯಿಂದ ಮಾತ್ರ ಕಂಡುಕೊಳ್ಳದೆ, ಸಾಂಸ್ಕೃತಿಕ ಸಮಾಜಶಾಸ್ತ್ರದ (Socio-Cultural) ಮೂಲಕ ಅಧ್ಯಯನ ನಡೆಸಲಾಗುವುದು.

## ಅಧ್ಯಾಯ – 1.3
## ಬಾಕುಡರ ಬಗೆಗೆ ಈ ವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಬಾಕುಡರ ಬಗ್ಗೆ ಈವರೆಗೆ ಯಾವ ಸಂಶೋಧನಾತ್ಮಕ ಅಧ್ಯಯನಗಳು ಜರಗಿಲ್ಲ. ಕೆಲವು ಲೇಖನಗಳು ಪ್ರಕಟಗೊಂಡಿವೆ. 'ಪನಿಯಾರ' ಎನ್ನುವ (ನೆಂಪು ಸಂಚಿಕೆ : ಪುಟ ಸಂಖ್ಯೆ 155: 1989) ಸಮ್ಮೇಳನದ ಕೃತಿಯಲ್ಲಿ ಬಾಕುಡರ ಬಳಿ, ಆಹಾರ ಪದ್ಧತಿಗಳ ವಿವರ ಬಂದಿದೆ. ವೆಂಕಟರಾಜ ಮುಣಂಚಿತ್ತಾಯರವರು ಬಾಕುಡರ ನಾಗರಾಧನೆಯ ಬಗ್ಗೆ ಉದಯವಾಣಿ ಪತ್ರಿಕೆಯಲ್ಲಿ ಲೇಖನ ಪ್ರಕಟಪಡಿಸಿದ್ದಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ (ಗಣಪತಿ ರಾವ್ 1922)ರಲ್ಲಿ ಬಾಕುಡರ ವಾಸಸ್ಥಾನದ ಉಲ್ಲೇಖ ಮಾಡಿದ್ದಾರೆ. ಡಿ.ಆರ್. ಪಾಂಡುರಂಗರವರು ದಕ್ಷಿಣ ಕನ್ನಡ ಜಿಲ್ಲೆಯ ಭೈರರು ಎನ್ನುವ ಸಂಶೋಧನಾ ಗ್ರಂಥದಲ್ಲಿ ಬಾಕುಡ ಬಳಿಗಳ ಸಂಖ್ಯೆಗಳನ್ನು (ಪುಟ 248) ಹೇಳಿದ್ದಾರೆ. ಇವುಗಳಲ್ಲದೆ ಹೆಚ್ಚಿನ ಲೇಖನಗಳು ಪ್ರಕಟವಾಗಿದ್ದಲ್ಲಿ ಅವುಗಳನ್ನು ಅಭ್ಯಸಿಸಿ ಸರಿಯಾದ ಅಂಶಗಳನ್ನು ಕ್ಷೇತ್ರಕಾರ್ಯ ಮತ್ತು ಮಾಹಿತಿ ಸಂಗ್ರಹಣೆಯ ಮೂಲಕ ಕಂಡುಕೊಳ್ಳುವುದು.

## ಅಧ್ಯಾಯ – 2

'ಬಾಕುಡ' ಶಬ್ದದ ನಿಷ್ಪತ್ತಿ, ಅವರ ಮೂಲ ಎಲ್ಲಿಂದ ಪ್ರಾರಂಭವಾಯಿತೆನ್ನುವುದನ್ನು ಚಾರಿತ್ರಿಕ ಹಿನ್ನಲೆಯ ಮೂಲಕ ಸಂಶೋಧನೆ ನಡೆಸುವುದು. ವಲಸಾ ಪ್ರವೃತ್ತಿ ಇದ್ದ ಬಾಕುಡರಲ್ಲಿ ಭಾಷೆಯಲ್ಲಿ ವ್ಯತ್ಯಾಸ ಕಂಡು ಬಂದಿದೆಯೋ ಅಥವಾ ಇತರ ವರ್ಗದವರ ತುಳು ಭಾಷೆಗೂ ಇವರಲ್ಲಿರಬಹುದಾದ ತುಳು ಭಾಷೆಗೂ ವ್ಯತ್ಯಾಸವಿದೆಯೇ, ಇವರ ಪದ ಉಚ್ಚಾರಣೆ ಇತ್ಯಾದಿಗಳನ್ನು ಗಮನಿಸುವುದು.

ಎಲ್ಲಾ ಜಾತಿಗಳಲ್ಲಿರುವಂತೆಯೇ ಬಾಕುಡರಲ್ಲೂ ಬಳಿ ಪದ್ಧತಿಗಳಿವೆ. ಅಂದರೆ "ಪದಿನೆನಮ ಸ್ಥಾನದ ಮೂಲೀರ ಬೈದರಾ..... ಎಂದು ಭೂತರಾಧನೆಯಲ್ಲಿ ಉದ್ದರಿಸಲ್ಪಡುತ್ತದೆ". ಈಗ 18 ಬಳಿಗಳಲ್ಲದೆ ಅದಕ್ಕಿಂತ ಹೆಚ್ಚು ಬಳಿಗಳಿವೆಯೋ ಇದ್ದರೆ ವಿಂಗಡನೆ ಕಂಡು ಬಂದಿದೆಯೋ, ಬಳಿನಾಮಗಳಲ್ಲಿ ಸ್ಥಳನಾಮವೂ. ವೃತ್ತಿನಾಮವೂ ಅಥವಾ ಸ್ವಭಾವಕ್ಕನುಗುಣವಾಗಿ ಹೆಸರುಗಳಿವೆಯೋ ಎಂಬುದನ್ನು ಪತ್ತೆಹಚ್ಚುವುದು.

ಕುಟುಂಬ ಪದ್ಧತಿಯಲ್ಲಿ ಅವಿಭಕ್ತ ಕುಟುಂಬವೋ ವಿಭಕ್ತ ಕುಟುಂಬವೊ ಎಂಬುದಾಗಿ ಗುರುತಿಸುವುದು ಮತ್ತು ಮನೆಗಳನ್ನು ಹೇಗೆ ಕಟ್ಟಿಕೊಳ್ಳುತ್ತಿದ್ದರೂ, ಇತರ ಜಾತಿಗಳ ಮನೆಗಳಿಗೂ ಇವರ ಮನೆಗಳಿಗೂ ಇರುವ ವ್ಯತ್ಯಾಸವೇನು? ದಲಿತರೆಂದು ಕರೆಯಲ್ಪಡುವ ಈ ಜನರ ಸ್ಥಾನಮಾನ ಹೇಗಿದೆ? ಮೇಲು ವರ್ಗದ ದೃಷ್ಟಿಯಲ್ಲಿ ಹೇಗೆ ಪರಿಶಿಷ್ಟ ಜಾತಿಯವರಲ್ಲಿ ಮತ್ತು ವರ್ಗದವರಲ್ಲಿ ಇವರ ಸ್ಥಾನಮಾನವೇನೆಂಬುದನ್ನು ಗುರುತಿಸುವುದು. ಶಿಕ್ಷಣದ ಮಟ್ಟ ಇವರಲ್ಲಿ ಹೇಗಿದೆ? ಇತ್ಯಾದಿಗಳನ್ನು ಅಧ್ಯಯನ ನಡೆಸಿ ಉತ್ತಮ ಅಂಶಗಳನ್ನು ತಿಳಿಯಪಡಿಸುವುದು.

## ಅಧ್ಯಾಯ – 3

ಬಾಕುಡರ ಜನನ–ನಾಮಕರಣದ ಆಚರಣೆಗಳು, ತೊಟ್ಟಿಲು ಹಾಕುವುದು, ಕಿವಿಚುಚ್ಚುವುದು, ಕಜಂಬು ತೆಗೆಯುವುದು, ಋತುಶಾಂತಿ, ಮುಟ್ಟು, ಮದುವೆ, ಸೀಮಂತ, ಸಾವು, ಸಂಸ್ಕಾರ ಇತ್ಯಾದಿಗಳನ್ನು ಗುರುತಿಸಿ ಇವುಗಳಲ್ಲಿರಬಹುದಾದ ಅರ್ಥಗಳನ್ನು ಬಾಕುಡರ ಸಾಂಸ್ಕೃತಿಯ ಹಿನ್ನಲೆಯಲ್ಲಿ ನೀಡಲು ಪ್ರಯತ್ನಿಸುವುದು.

## ಅಧ್ಯಾಯ – 4
## ಬಾಕುಡರ ವಾರ್ಷಿಕ ಆವರ್ತನದ ಆಚರಣೆಗಳು

ಬಾಕುಡರ ವಾರ್ಷಿಕ ಆವರ್ತನದ ಹಬ್ಬಗಳು ಮತ್ತು ಆಚರಣೆಗಳಾದ ಆಟಿ ಸಂಕ್ರಮಣ, ಪತ್ತನಾಜೆ, ಕೆಡ್ಡಸ, ವಿಷು, ಮಾಯಿ ತಿಂಗಳಿನ ಹತ್ತನೇಯ ದಿನ, ಮಾರ್ಚಿ ತಿಂಗಳಿನ ಸಂಕ್ರಮಣ, ಮತ್ತು ಕರಂಗೋಲು ಕುಣಿತ ಇತ್ಯಾದಿಗಳ ವಿಶೇಷತೆಗಳನ್ನು ಅಧ್ಯಯನ ಮಾಡುವುದು. ಈ ವಾರ್ಷಿಕ ಆವರ್ತನಗಳ ಬಗ್ಗೆ ಅವರಲ್ಲಿರಬಹುದಾದ ನಂಬಿಕೆ ಆಚರಣೆಗಳನ್ನು ವಿಶ್ಲೇಷಿಸುವುದು.

## ಅಧ್ಯಾಯ – 5
## ಬಾಕುಡರ ಜನಪದ ವೈದ್ಯ

ಜೀವಂತವಿರುವ ಪ್ರತಿಯೊಂದು ಜೀವಿಗೂ ರೋಗ ತಟ್ಟೆ ತಟ್ಟುತ್ತದೆ. ಈ ರೋಗಗಳಿಗೆ ಹಲವಾರು ಕಾರಣಗಳಿವೆ. ಮನುಷ್ಯ ಮಾಡುವ ಕೆಲಸ ಕಾರ್ಯ, ಹವಾಮಾನದ ವೈಪರಿತ್ಯ, ದುಶ್ಚಟ, ಆಹಾರದ ಕೊರತೆ ಕಾರಣವಿರಬಹುದು. ಇವು ಮನುಷ್ಯನನ್ನು ಆತಂಕಕ್ಕೆ ಒಳಪಡಿಸುವುದು ಮಾತ್ರವಲ್ಲ ರೋಗ ದೇಹಕ್ಕೆ ತಟ್ಟುವುದಕ್ಕಿಂತಲೂ ಹೆಚ್ಚಾಗಿ ಮನಸ್ಸಿಗೆ ತಟ್ಟುತ್ತದೆ. ಇದರಿಂದ ಪರಿಹಾರವನ್ನು ಕಂಡುಕೊಳ್ಳಲು ವ್ಯಕ್ತಿ ಮಾಂತ್ರಿಕ ವೈದ್ಯತನಕ್ಕೆ ಮತ್ತು ನಂಬಿಕೆಗಳಿಗೆ ಒಳಗಾಗುತ್ತಾನೆ. ಇಂತಹ ವೈದ್ಯತನ ನಂಬಿಕೆಗಳು ಬಾಕುಡರಲ್ಲಿ ಪ್ರಚಲಿತವಿದೆ. ಇವುಗಳನ್ನು ಪತ್ತೆ ಹಚ್ಚಿ ಸಂಶೋಧನೆ ನಡೆಸಲಾಗುವುದು.

## ಅಧ್ಯಾಯ – 6
## ಬಾಕುಡರ ಆರಾಧನಾ ಪದ್ಧತಿ

ಬಾಕುಡರಲ್ಲಿ ವಿಶೇಷವಾಗಿ ಕಂಡುಬರುವುದು ನಾಗಾರಾಧನೆ. ಇವು ಸಾಮಾನ್ಯವಾಗಿ ಎಲ್ಲ ಜಾತಿಗಳಲ್ಲಿ ಇದೆಯಾದರೂ, ಬಾಕುಡರಲ್ಲಿ ವಿಶಿಷ್ಟ ರೀತಿಯಲ್ಲಿ ಆರಾಧನೆ ಕಂಡುಬರುತ್ತದೆ. ಈ

ನಾಗಾರಾಧನೆಯೂ ಮತ್ತು ಬಾಕುಡರ ಸಂಸ್ಕೃತಿಗೂ ಇರುವ ಸಂಬಂಧಗಳನ್ನು ಅಧ್ಯಯನ ನಡೆಸುವುದು, ಮತ್ತು ದೈವಸ್ಥಾನಗಳಲ್ಲಿ ಭೂತಾರಾಧನೆ, ತರವಾಡಿನ ಭೂತಗಳು ಇತ್ಯಾದಿಗಳನ್ನು ಕ್ಷೇತ್ರಕಾರ್ಯಗಳ ಸಹಾಯದಿಂದ ಮತ್ತು ಮೌಖಿಕ ಸಾಹಿತ್ಯಗಳ ಮೂಲಕ (ಪಾಡ್ದನ) ಗುರುತಿಸಿ ಇವುಗಳಲ್ಲಿರುವ ವಿಶಿಷ್ಟತೆಯೇನೆಂಬುದನ್ನು ಕಂಡುಕೊಳ್ಳುವುದು.

## ಉಪಸಂಹಾರ

ಭಾರತದಲ್ಲಿ ಹಲವಾರು ಬುಡಕಟ್ಟು, ಜಾತಿ ಮತ್ತು ವರ್ಗಗಳಿವೆ. ಇವುಗಳಲ್ಲಿ ಇಷ್ಟರವರೆಗೆ ಕೆಲವು ಬುಡಕಟ್ಟು ಜನರ ಸಂವೇದನೆ ಮಾತ್ರ ಜರಗಿದ್ದು ಉಳಿದವುಗಳ ಸಂಶೋಧನೆ ಜರಗಿಲ್ಲ. ಸಂಶೋಧನೆ ನಡೆದ ಬುಡಕಟ್ಟು ಸಂಸ್ಕೃತಿಯ ಮೂಲಕ ಇವರ ಸಂಸ್ಕೃತಿಯ ಬಿನ್ನತೆಯನ್ನು ಮತ್ತು ವೈಶಿಷ್ಟ್ಯವನ್ನು ಗುರುತಿಸಲಾಗುವುದು.

ಕೊನೆ ಟಿಪ್ಪಣಿ
ಅನುಬಂಧ
ಪರಮಾರ್ಶನ ಗ್ರಂಥಗಳು
ಮಾಹಿತಿದಾರರ ವಿವರ